# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಗದಗ ಜಿಲ್ಲೆಯ ಶಿರಹಟ್ಟಿಯಲ್ಲಿ ಹಿಂದು ಸೇವಾ ಪ್ರತಿಷ್ಠಾನ ನಡೆಸುವ ಮನೆಪಾಠ ಕೇಂದ್ರದ ಮಕ್ಕಳು ಕೋಟಿವೃಕ್ಷ ಅಭಿಯಾನದ ಅಂಗವಾಗಿ ಗಿಡ ನೆಟ್ಟು ಸಂಭ್ರಮಿಸಿದರು.


ಸಂಪುಟ : 38 ಸಂಚಿಕೆ : 22 ಹೇಮಲಂಬಿ–ಆಷಾಢ ಕಲಿಯುಗಾಬ್ದ 5119 1–7–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಜಾಗತೀಕರಣದ 25 ವರ್ಷ ಪೂರೈಸಿದ ಭಾರತ: ಹುಸಿಯಾದ ನಿರೀಕ್ಷೆಗಳು

1991 ರಲ್ಲಿ ಪಿ. ವಿ. ನರಸಿಂಹ ರಾವ್ ಸರ್ಕಾರದಲ್ಲಿ ಮನಮೋಹನ ಸಿಂಗರು ಹಣಕಾಸು ಸಚಿವರಾಗಿದ್ದರು. ಅಂದು ನಮ್ಮ ವಿದೇಶೀ ವಿನಿಮಯದ ಕೊರತೆ ಅತ್ಯಂತ ಅಪಾಯದ ಮಟ್ಟದಲ್ಲಿತ್ತು. ಅದಾಗಲೇ, ರಿಸರ್ವ್ ಬ್ಯಾಂಕಿನಲ್ಲಿದ್ದ ಚಿನ್ನವನ್ನು ಅಡವಿಟ್ಟು ಬ್ಯಾಂಕ್ ಆಫ್ ಇಂಗ್ಲೆಂಡ್‌ನಿಂದ ಸಾಲ ತಂದಾಗಿತ್ತು. ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) 2.2 ಶತಕೋಟಿ ಸಾಲ ತರಲಾಯಿತು. ಸುಮ್ಮನೇ ಕೊಡಲಿಲ್ಲ ಸಾಲ, ಜಾಗತೀಕರಣಕ್ಕೆ ನಮ್ಮ ಮಾರುಕಟ್ಟೆಯನ್ನು ತೆರೆದಿಡಲು ಅನುಕೂಲವಾಗುವಂತೆ ಆರ್ಥಿಕ ನೀತಿಗಳನ್ನು ಬದಲಿಸಬೇಕೆಂಬ ಷರತ್ತನ್ನೂ ವಿಧಿಸಿತು. ಹೀಗೆ, ಸಂಸತ್ತಿನಲ್ಲಿ ಚರ್ಚೆಯಾಗದೆಯೇ, ಜಾಗತೀಕರಣದ ನೀತಿಗಳು ಜಾರಿಗೊಂಡು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ನಮ್ಮ ದೇಶ ತೆರೆದುಕೊಂಡಿತು.

ಆರ್ಥಿಕ ಅಭಿವೃದ್ಧಿಯೇ ಜಾಗತೀಕರಣದ ಮುಖ್ಯ ಗುರಿ ಎನ್ನುವುದು ಅದರ ಸಮರ್ಥಕರ ವಾದ. ಅಂದರೆ – ಉದ್ಯೋಗ ಸೃಷ್ಟಿ, ಬಡತನ ನಿವಾರಣೆ, ಜನರ ಜೀವನ ಮಟ್ಟ ಸುಧಾರಣೆ ಮತ್ತು ಪರಿಸರಕ್ಕೆ ಮಾರಕವಲ್ಲದ ಅಭಿವೃದ್ಧಿ ಎನ್ನಬಹುದು. ಈ ಅಂಶಗಳನ್ನೇ ಆಧಾರವಾಗಿಟ್ಟುಕೊಂಡು ಇಂದು ನಮ್ಮ ಪರಿಸ್ಥಿತಿಯನ್ನು ಅವಲೋಕಿಸಿದರೆ, ಜಾಗತೀಕರಣದಿಂದ ನಮ್ಮ ಆರ್ಥಿಕತೆ ಎಷ್ಟು ಸುಧಾರಿಸಿದೆ ಎನ್ನುವುದು ಗೊತ್ತಾಗುತ್ತದೆ.

### ಉದ್ಯೋಗ ಸೃಷ್ಟಿ

ಬಡತನ ನಿವಾರಣೆಯಾಗಬೇಕಾದರೆ ಎಲ್ಲರಿಗೂ ಉದ್ಯೋಗವಿರಬೇಕು. ಉದ್ಯೋಗ ಸೃಷ್ಟಿಸದ ಆರ್ಥಿಕತೆಯಿಂದ ಯಾವುದೇ ದೇಶಕ್ಕೆ ಉಪಯೋಗವಿಲ್ಲ. ಜಾಗತೀಕರಣದಿಂದಾಗಿ ಭಾರತಕ್ಕೆ ಬಂದ ದೊಡ್ಡ ಕಂಪೆನಿಗಳು ತಂದ ಉದ್ಯೋಗಗಳ ಸಂಖ್ಯೆ ಮಾತ್ರ ಬಹಳ ಕಡಿಮೆ. ಅವುಗಳು ನೀಡುತ್ತಿರುವ ಉದ್ಯೋಗ ಶೇ. 7 ಮಾತ್ರ. ಉಳಿದ ಶೇ. 93% ರಷ್ಟು ಉದ್ಯೋಗ ಕೊಡುತ್ತಿರುವುದು ಅಸಂಘಟಿತ ಕ್ಷೇತ್ರದ ಸಂಸ್ಥೆಗಳೇ. 1990 ರಲ್ಲಿ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗಗಳ ಸಂಖ್ಯೆ 2.7 ಕೋಟಿಯಷ್ಟಿದ್ದರೆ, 20 ವರ್ಷಗಳ ಬಳಿಕವೂ ಅದು ಸುಮಾರು 3 ಕೋಟಿಯಷ್ಟೇ ಇತ್ತು. ಉಳಿದ ಸುಮಾರು 40 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಕೊಡುತ್ತಿರುವುದು ಅಸಂಘಟಿತ ಕ್ಷೇತ್ರವೇ. ಆದರೆ, ಜಾಗತೀಕರಣದಿಂದ ಪ್ರಯೋಜನ (ತೆರಿಗೆ ವಿನಾಯತಿ, ಉಚಿತ ಭೂಮಿ, ಸುಲಭ ಸಾಲ ಇತ್ಯಾದಿ) ಪಡೆಯುತ್ತಿರುವುವದು ಸಂಘಟಿತ ಕ್ಷೇತ್ರದ ಕಂಪೆನಿಗಳು ಮಾತ್ರ. ಹೆಚ್ಚು ಉದ್ಯೋಗ ನೀಡುತ್ತಿರುವ ಅಸಂಘಟಿತ ಕ್ಷೇತ್ರಕ್ಕೆ ನಮ್ಮ ಆರ್ಥಿಕ ನೀತಿಯ ಪ್ರೋತ್ಸಾಹವಿಲ್ಲ. ಆದರೆ, ಸವಲತ್ತುಗಳನ್ನು ಪಡೆದ ಬಹುರಾಷ್ಟ್ರೀಯ ಕಂಪೆನಿಗಳ ಗಮನ ಕಡಿಮೆ ಉದ್ಯೋಗಿಗಳಿಂದ ಹೆಚ್ಚಿನ ಲಾಭ ಗಳಿಸುವುದು ಮಾತ್ರ.

- ದೇಶದ 1% ರಷ್ಟು ಜನರ ಬಳಿ 60% ರಷ್ಟು ಸಂಪತ್ತು ಕ್ರೋಢೀಕರಣವಾಗಿದೆ ಎಂದು ಕ್ರೆಡಿಟ್ ಸ್ವಿಸ್ ರಿಸರ್ಚ್ ಇನ್ಸ್ಟಿಟ್ಯೂಟ್ ಪ್ರಕಟಿಸಿದ 2016ರ ಗ್ಲೋಬಲ್ ವೆಲ್ತ್ ರಿಪೋರ್ಟ್ ಹೇಳುತ್ತದೆ.
- ಹಾಗೆಯೇ, ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚಾಗಿರುವ ದೇಶಗಳ ಸಾಲಿನಲ್ಲಿ ಭಾರತ 2ನೇ ಸ್ಥಾನದಲ್ಲಿದೆ ಎನ್ನುತ್ತದೆ ಈ ವರದಿ.

### ಬಡತನ ನಿವಾರಣೆ

ನಿರುದ್ಯೋಗ ಸಮಸ್ಯೆ ನಿವಾರಣೆಯಾಗದೇ, ಬಡತನ ನಿರ್ಮೂಲನೆಯಾಗಲು ಹೇಗೆ ಸಾಧ್ಯ? ವಿಶ್ವಸಂಸ್ಥೆಯ ಪ್ರಕಾರ ದಿನಕ್ಕೆ 2 ಡಾಲರ್ (130 ರೂಪಾಯಿ) ಗಳಿಗಿಂತ ಕಡಿಮೆ ಆದಾಯ ಇರುವ ವ್ಯಕ್ತಿಗಳನ್ನು ಬಡವರು ಎಂದು ಪರಿಗಣಿಸಲಾಗುತ್ತದೆ. ಸರ್ಕಾರದ ಪ್ರಕಾರ 22% ಜನರು ಬಡತನ ರೇಖೆಯ ಕೆಳಗಿದ್ದರೆ, ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಭಾರತದ 55% ಜನರು ಇನ್ನೂ ಬಡವರೇ ಆಗಿದ್ದಾರೆ.



ಅದೇ ವೇಳೆ, ಭಾರತದ 100 ಶ್ರೀಮಂತರ ಒಟ್ಟು ಆಸ್ತಿ 13 ಲಕ್ಷ ಕೋಟಿ ರೂಪಾಯಿಗಳಾಗಿವೆ. ಅಂದರೆ, ಭಾರತದ ಜಿಡಿಪಿಯ 25% ರಷ್ಟು. ಹೀಗೆ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚಾಗುತ್ತಲೇ ಇದೆ.

ಕೃಷಿಯೇ ನಮ್ಮ ಹೆಚ್ಚಿನ ಜನರ ಜೀವನಾಧಾರ. 1990–91 ರಲ್ಲಿ ರಾಷ್ಟ್ರೀಯ ಆದಾಯಕ್ಕೆ ಕೃಷಿ ಕ್ಷೇತ್ರದ ಕೊಡುಗೆ 29% ಇದ್ದಿದ್ದು, 2010–11 ರ ಹೊತ್ತಿಗೆ ಶೇ. 18 ಕ್ಕಿಳಿದಿತ್ತು. 1995 ರಿಂದ 2011 ರವರೆಗಿನ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 2.7 ಲಕ್ಷಕ್ಕೂ ಅಧಿಕ! ಅಂದರೆ, ಕೃಷಿ ಕ್ಷೇತ್ರ ಯಾವ ರೀತಿ ನಿರ್ಲಕ್ಷಿಸಲ್ಪಟ್ಟಿದೆ ಎಂಬುದು ತಿಳಿಯುತ್ತದೆ.

ಕೈಗಾರಿಕೆಗಳಿಗೆ 2005–06 ರಿಂದ 2011–12 ರ ಅವಧಿಯಲ್ಲಿ ಕೊಟ್ಟ ತೆರಿಗೆ ವಿನಾಯತಿ 25.7 ಲಕ್ಷ ಕೋಟಿಗಳು. ಅದರ ಅರ್ಧ ಭಾಗವನ್ನೂ ಈ ಅವಧಿಯಲ್ಲಿ ರೈತರ ಸಾಲ ಮನ್ನಾ ಮಾಡಲು ಸರ್ಕಾರಗಳು ವಿನಿಯೋಗಿಸಿಲ್ಲ. ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿ ಮಾಡಲೂ ಸರ್ಕಾರಗಳು ಹಿಂದೆ ಮುಂದೆ ನೋಡುತ್ತಿವೆ. ರೈತರ ಆತ್ಮಹತ್ಯೆಗಳು ಇನ್ನೂ ನಡೆಯುತ್ತಲೇ ಇವೆ.

### ಜನರ ಜೀವನಮಟ್ಟ

ಸರಾಸರಿ ಆಯಸ್ಸು, ಸಾಕ್ಷರತೆ, ತಲಾ ಆದಾಯ ಇವುಗಳನ್ನು ಆಧರಿಸಿ ವಿಶ್ವಸಂಸ್ಥೆ ಮಾನವ ಅಭಿವೃದ್ಧಿ ರ್‍ಯಾಂಕನ್ನು ಪ್ರಕಟಿಸುತ್ತದೆ. ಈ ಪಟ್ಟಿಯಲ್ಲಿ 2005 ನೇ ಇಸವಿಯಲ್ಲಿ 177 ದೇಶಗಳ ಪೈಕಿ ಭಾರತ 127 ನೇ ಸ್ಥಾನದಲ್ಲಿತ್ತು. 2012 ರಲ್ಲಿ 187 ದೇಶಗಳ ಪೈಕಿ 136 ನೇ ಸ್ಥಾನದಲ್ಲಿತ್ತು. ದೇಶಕ್ಕೆ ವಿದೇಶೀ ಬಂಡವಾಳ ಬಂದರೂ, ಜಿಡಿಪಿಯಲ್ಲಿ ಹೆಚ್ಚಳವಾಗಿದ್ದರೂ, ಜನರ ಜೀವನ ಮಟ್ಟ ಮಾತ್ರ ಸುಧಾರಣೆಯಾಗಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ 2012 ರಲ್ಲಿ 79 ದೇಶಗಳ ಪೈಕಿ ಭಾರತ 65 ನೇ ಸ್ಥಾನದಲ್ಲಿತ್ತು. ಪಾಕಿಸ್ತಾನ, ನೇಪಾಳ, ಉತ್ತರ ಕೊರಿಯಾ, ಥೈಲ್ಯಾಂಡ್, ಶ್ರೀಲಂಕಾಗಳಿಗಿಂತ ಭಾರತ ಈ ವಿಷಯದಲ್ಲಿ ಕೆಳಗಿನ ಸ್ಥಾನದಲ್ಲಿದೆ.

2012 ರಲ್ಲಿ ಅಂದಿನ ಪ್ರಧಾನಿ ಮನಮೋಹನ ಸಿಂಗರು ಬಿಡುಗಡೆ ಮಾಡಿದ ವರದಿಯಲ್ಲಿ 5 ವರ್ಷಕ್ಕಿಂತ ಸಣ್ಣ ಮಕ್ಕಳ ಪೈಕಿ ಶೇ. 45 ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂಬುದು ಉಲ್ಲೇಖವಾಗಿತ್ತು. ಇದೊಂದು ರಾಷ್ಟ್ರೀಯ ಅವಮಾನ ಎಂದು ಸ್ವತಃ ಅವರೇ ಹೇಳಿದ್ದರು.

**2011 ರ ಜನಗಣತಿಯ ಪ್ರಕಾರ ನಮ್ಮ ದೇಶದ ಸ್ಥಿತಿ ಹೀಗಿದೆ:**

- 60% ಜನರ ಬಳಿ ಮೊಬೈಲ್ ಫೋನ್ ಇದೆ
- 53% ಮನೆಗಳಲ್ಲಿ ಶೌಚಾಲಯವಿಲ್ಲ
- 56% ಮನೆಗಳಲ್ಲಿ ಕೊಳಾಯಿ ನೀರಿನ ವ್ಯವಸ್ಥೆಯಿಲ್ಲ
- 49% ಮನೆಗಳಲ್ಲಿ ಚರಂಡಿ ವ್ಯವಸ್ಥೆಯಿಲ್ಲ
- 67% ಮನೆಗಳಲ್ಲಿ ಅಡುಗೆಗೆ ಗ್ಯಾಸ್ ಇಲ್ಲ

- 2013 ರಲ್ಲಿ ಎಸ್‌ಬಿಐ 1,500 ಅಧಿಕಾರಿಗಳ ಹುದ್ದೆಗೆ ಅರ್ಜಿ ಕರೆದಾಗ ಬಂದ ಅರ್ಜಿಗಳ ಸಂಖ್ಯೆ 17 ಲಕ್ಷ. ಅಂದರೆ, ಪ್ರತಿ ಹುದ್ದೆಗೆ 1,133 ಅರ್ಜಿಗಳು!
- 2011 ರಲ್ಲಿ 11,000 ಗುಮಾಸ್ತರ ಹುದ್ದೆಗೆ ಬಂದ ಅರ್ಜಿಗಳ ಸಂಖ್ಯೆ 34 ಲಕ್ಷ. ಅಂದರೆ, ಪ್ರತಿ ಹುದ್ದೆಗೆ 300 ಅರ್ಜಿಗಳು.

### ಪರಿಸರಕ್ಕೆ ಮಾರಕವಲ್ಲದ ಅಭಿವೃದ್ಧಿ

ಜಾಗತೀಕರಣದ ಈ ಅವಧಿಯಲ್ಲಿ ನಮ್ಮ ದೇಶದಲ್ಲಿನ ಉದ್ಯಮಗಳಿಂದ ಆಗುತ್ತಿರುವ ಪರಿಸರ ನಾಶ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. 1981 ರಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದಿದ್ದರೂ 1981 ರಿಂದ 2011 ರವರೆಗೆ 12 ಲಕ್ಷ ಹೆಕ್ಟೇರ್‌ಗಳಷ್ಟು ಅರಣ್ಯ ಭೂಮಿಯನ್ನು ಅಭಿವೃದ್ಧಿ ಉದ್ದೇಶಗಳಿಗೆ ಬಿಟ್ಟುಕೊಡಲಾಗಿದೆ.

ಜಗತ್ತಿನ 4ನೇ ಅತಿ ದೊಡ್ಡ ಇಂಗಾಲದ ಡೈ ಆಕ್ಸೈಡ್ ಉತ್ಪಾದಿಸುವ ದೇಶ ಭಾರತ. ಕೈಗಾರಿಕೆಗಳ ತ್ಯಾಜ್ಯ ಶುದ್ಧೀಕರಣಗೊಳಿಸದೇ ನದಿಗಳಿಗೆ ಬಿಡುವುದರಿಂದ ದೇಶದ ಹೆಚ್ಚಿನ ನದಿಗಳು ಮಲಿನಗೊಂಡಿವೆ. ವಾತಾವರಣ ಕಲುಷಿತಗೊಂಡಿರುವುದರಿಂದ ಆರೋಗ್ಯ ಸಮಸ್ಯೆಗಳೂ, ಅದಕ್ಕಾಗಿ ಜನಸಾಮಾನ್ಯರು ಮಾಡುವ ವೆಚ್ಚವೂ ಅಧಿಕಗೊಳ್ಳುತ್ತಿವೆ.

### ಜಾಗತೀಕರಣವೆಂಬ ಭ್ರಮೆ

ಇವೆಲ್ಲವನ್ನೂ ಗಮನಿಸಿದಾಗ, ಜಾಗತೀಕರಣ ನಮಗೆ ಮಾಡಿದ ಉಪಕಾರಕ್ಕಿಂತ ತೊಂದರೆಯೇ ಹೆಚ್ಚು ಎನ್ನುವುದು ಸ್ಪಷ್ಟವಾಗುತ್ತದೆ. ಇಡೀ ಪ್ರಪಂಚಕ್ಕೆ ಒಂದೇ ಮಾದರಿಯೆಂಬ ಪಶ್ಚಿಮದ ಚಿಂತನೆಯೇ ಅವಾಸ್ತವಿಕವಾದದ್ದು. ಹಾಗಾಗಿ, ಭಾರತಕ್ಕೆ ಹೊಂದಬಹುದಾದ ಅಭಿವೃದ್ಧಿ ಮಾದರಿ ಯಾವುದು ಎಂಬ ಬಗ್ಗೆ ಇನ್ನೂ ಹೆಚ್ಚಿನ

ಚಿಂತನೆ ನಡೆಯಬೇಕಿದೆ. ಉದ್ಯೋಗಾಧಾರಿತ, ಗ್ರಾಮಾಧಾರಿತ ಮತ್ತು ಕೃಷಿಗೆ ಪ್ರೋತ್ಸಾಹ ಕೊಡುವ ಅಭಿವೃದ್ಧಿ ಮಾದರಿ ನಮಗೆ ಇಂದು ಅಗತ್ಯ.

ಪಾಸ್‌ಪೋರ್ಟನ್ನು ಎಲ್ಲೆಡೆ ವಿತರಿಸುವ ಕೇಂದ್ರಗಳು ಬಂದರೆ, ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಏರ್‌ಪೋರ್ಟ್ ಬಂದರೆ, ಜಗತ್ತಿನ ದೊಡ್ಡ ಐಟಿ ಪಾರ್ಕ್‌ಗಳು ನಮ್ಮಲ್ಲಿ ಬಂದರೆ ನಾವು ಅಭಿವೃದ್ಧಿ ಹೊಂದುತ್ತಿದ್ದೇವೆಂಬುದು ಕೇವಲ ಭ್ರಮೆ. ಇಂದು ನಮ್ಮಲ್ಲಿರುವ ಸಾಫ್ಟ್‌ವೇರ್ ಮೊದಲಾದ ರಫ್ತು ಆಧಾರಿತ ಉದ್ಯಮಗಳು ಡಾಲರ್ ಎದುರು ರೂಪಾಯಿ ದುರ್ಬಲವಾಗಿರುವವರೆಗೆ ಇದ್ದಾವು. ರೂಪಾಯಿ ಬಲಗೊಳ್ಳುತ್ತಿದ್ದಂತೆ ಅವೆಲ್ಲ ರಷ್ಯಾಕ್ಕೋ, ಚೀನಾಕ್ಕೋ, ಯುಕ್ರೇನಿಗೋ ಹೋಗುವುದರಲ್ಲಿ ಸಂಶಯವಿಲ್ಲ. ಆಗ, ನಮ್ಮ ಅಭಿವೃದ್ಧಿಯ ಗುಳ್ಳೆ ಒಡೆಯುತ್ತದೆ. ಅದಕ್ಕೂ ಮುನ್ನವೇ ಎಚ್ಚೆತ್ತುಕೊಂಡು ಬದಲಿ ವ್ಯವಸ್ಥೆಯೇನು ಎನ್ನುವುದರ ಕುರಿತು ಗಂಭೀರ ಯೋಚನೆಯನ್ನು ಸರ್ಕಾರಗಳೂ ಆರ್ಥಿಕತಜ್ಞರೂ ಮಾಡುವುದೊಳ್ಳೆಯದು. ನಮ್ಮ ಆರ್ಥಿಕತೆ ನಮ್ಮ ಕೈಯಲ್ಲೇ ಇರಬೇಕೇ ಹೊರತು, ಬೇರ್‍ಯಾವುದೋ ದೇಶಕ್ಕೆ ನಾವು ಮಾಡುವ ರಫ್ತನ್ನು ಅವಲಂಬಿಸಿರುವುದು ಒಳ್ಳೆಯದಲ್ಲ.

ಅಷ್ಟಕ್ಕೂ, ಕಾರ್ಪೋರೇಟ್ ಕಂಪೆನಿಗಳಿಗೆ ಬೇಕಾಗಿರುವುದು ಹಣವೇ ಹೊರತು, ಜನರಿಗೆ ಉದ್ಯೋಗ ನೀಡುವುದಲ್ಲ. ಇಲ್ಲಿ ಕಡಿಮೆ ಹಣಕ್ಕೆ ಕೆಲಸ ಆಗದಿದ್ದರೆ, ಇನ್ನೊಂದು ದೇಶಕ್ಕೆ ಹೋಗಲು ಅವುಗಳಿಗೆ ಯಾವುದೇ ಮುಲಾಜಿಲ್ಲ. ಯಾವ ದೇಶಕ್ಕೂ ನಿಷ್ಠರಲ್ಲ, ಅವರು. ಅವರ ನಿಷ್ಠೆ ಹಣಕ್ಕೆ ಮಾತ್ರ. ಇದು ನಮಗೆ ನೆನಪಿರಲಿ!



| | |
|---|---|
| **ಹೆಸರು :** | ಮಲೆನಾಡು ಗಿಡ್ಡ, ಊರದನ ಹಾಗೂ ವರ್ಷಗಂಧಿ ಎಂದೂ ಈ ತಳಿಯನ್ನು ಕರೆಯಲಾಗುತ್ತದೆ |
| **ಮೂಲ :** | ಕರ್ನಾಟಕದ ಮಲೆನಾಡು – ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ–ಉತ್ತರ ಕನ್ನಡ, ಕರಾವಳಿ ಪ್ರದೇಶಗಳಲ್ಲಿಯೂ ಇವುಗಳನ್ನು ಕಾಣಬಹುದು |
| **ರೂಪ :** | ಗಾತ್ರದಲ್ಲಿ ಚಿಕ್ಕವು. ಕಂದು, ಕಪ್ಪು ಬಣ್ಣಗಳನ್ನು ಹೊಂದಿರುತ್ತವೆ. ಬಹಳ ಸೌಮ್ಯ ಸ್ವಭಾವದ ಹಸುಗಳು. |
| **ವಿಶೇಷತೆ :** | ಅತ್ಯದ್ಭುತ ರೋಗ ನಿರೋಧಕ ಶಕ್ತಿ ಹೊಂದಿವೆ. ಹಾಲು ಮತ್ತು ಗೋಮೂತ್ರ ಬಹಳ ಔಷಧೀಯ ಗುಣಗಳನ್ನು ಹೊಂದಿವೆ. ಸಾಕುವುದು ಸುಲಭ. ಕೇವಲ ಹೊಲಗದ್ದೆ, ಗುಡ್ಡಬೆಟ್ಟಗಳಲ್ಲಿ ಮೇಯಿಸಿಯೇ ಇವುಗಳನ್ನು ಪೋಷಿಸಬಹುದು. |
| **ಹಾಲಿನ ಪ್ರಮಾಣ:** | ಒಂದು ಕರಾವಿನಲ್ಲಿ ಸರಾಸರಿ 250–400 ಲೀಟರ್ |

# ಬಗೆ ಬಗೆ ರಾಗಿ!

ನೆಲದ ಮಾತು

ದಕ್ಷಿಣ ಕರ್ನಾಟಕ ಭಾಗದ ಪ್ರಮುಖ ಬೆಳೆಯಾದ ರಾಗಿಯಲ್ಲಿ ಹಲವು ದೇಸಿ ತಳಿಗಳಿವೆ. ಮುದ್ದೆಗಷ್ಟೇ ಅದರ ಬಳಕೆ ಸೀಮಿತವಲ್ಲ. ಬೇರೆ ಬೇರೆ ಉದ್ದೇಶಗಳಿಗೆ ಬೇರೆ ಬೇರೆ ತಳಿಗಳು ಹೆಸರುವಾಸಿ. ಬದಲಾದ ಸನ್ನಿವೇಶದಲ್ಲಿ, ನೋಡಿದಷ್ಟೂ ಭತ್ತದ ಪೈರು ಕಾಣುತ್ತಿದ್ದ ಮಂಡ್ಯ ಜಿಲ್ಲೆಯಲ್ಲೀಗ ಖಾಲಿ ಗದ್ದೆಗಳು ಕಳವಳ ಮೂಡಿಸುವಂತಿವೆ. ಬೇಸಿಗೆ ಒಂದೆಡೆ ಇರಲಿ; ಮಳೆಗಾಲದಲ್ಲೂ ನೀರಿಲ್ಲ. ಇಂತಹ ಸನ್ನಿವೇಶದಲ್ಲಿ ಶಿವಳ್ಳಿ ಗ್ರಾಮದ ರೈತ ಸೋಮಶೇಖರ ಸದ್ದಿಲ್ಲದೇ ಸಿರಿಧಾನ್ಯ ಬೆಳೆದು ಅಕ್ಕಪಕ್ಕದ ಗ್ರಾಮಗಳ ರೈತರ ಗಮನ ಸೆಳೆದಿದ್ದಾರೆ. ಸೋಮಶೇಖರ ಬೆಳೆದಿರುವುದು ದೇಸಿ ತಳಿ ರಾಗಿ. ಒಂದೆರಡಲ್ಲ ಬರೋಬ್ಬರಿ 17 ತಳಿಗಳು!

ದೇಸಿ ತಳಿಗಳ ಮಹತ್ವವನ್ನು ರೈತರಿಗೆ ಮನವರಿಕೆ ಮಾಡಿಕೊಟ್ಟು, ಅವುಗಳ ಸಂರಕ್ಷಣೆಗೆ ಪ್ರಯತ್ನಿಸುತ್ತಿರುವ 'ಸಹಜ ಸಮೃದ್ಧ' ಬಳಗವು ರಾಗಿ ಆಯ್ದುಕೊಂಡಾಗ ಆರಂಭದಲ್ಲಿ ಬೆರಳೆಣಿಕೆಯಷ್ಟು ಮಾತ್ರ ದೇಸಿ ತಳಿಗಳು ಸಿಕ್ಕಿದವು. ಸತತ ಹುಡುಕಾಟ, ಸಂರಕ್ಷಣೆ ಕ್ರಮಗಳಿಂದ ಲಭ್ಯವಾಗಿದ್ದ 40 ತಳಿಗಳ ಪೈಕಿ ಸೋಮಶೇಖರ ಅವರಿಗೆ 17 ತಳಿ ರಾಗಿಯ ಬಿತ್ತನೆ ಬೀಜ ಕೊಡಲಾಯಿತು. ನರ್ಸರಿ ಮಾಡಿ, ತಮ್ಮ ಕಪ್ಪು ಮಣ್ಣಿನ ಜಮೀನಿನಲ್ಲಿ 25 ದಿನದ ಪೈರನ್ನು ನಾಟಿ ಮಾಡಿದ ಸೋಮಶೇಖರ್ ಕೊಟ್ಟಿಗೆ ಗೊಬ್ಬರ ಹೊರತುಪಡಿಸಿದರೆ ಮತ್ತೆ ಯಾವ ಗೊಬ್ಬರವನ್ನೂ ನೀಡಲಿಲ್ಲ.

ನಾಟಿ ಮಾಡಿದಾಗ, ಒಂದು ತಿಂಗಳ ಬಳಿಕ, ಗೊಬ್ಬರ ಹಾಕಿದಾಗ ಹಾಗೂ ಕಾಳು ಕಟ್ಟುವಾಗ – ಹೀಗೆ ನಾಲ್ಕು ಸಲ ಹೊಲಕ್ಕೆ ನೀರು ಕೊಡಲಾಗಿದೆ. ಆದರೂ ಒಣಗಿದ ನೆಲದಲ್ಲೂ ಪೈರು ಸದೃಢವಾಗಿ ಬೆಳೆದುನಿಂತಿದೆ. ಹೈಬ್ರಿಡ್ ರಾಗಿಗೆ ಇಳುಕು ರೋಗ ಅಥವಾ ಬೆಂಕಿ ರೋಗ ಸಾಮಾನ್ಯ. ಆದರೆ ದೇಸಿ ರಾಗಿ ತಳಿ ಅವೆಲ್ಲವನ್ನೂ ಎದುರಿಸಿ ನಿಲ್ಲುವ ಸಾಮರ್ಥ್ಯ ಹೊಂದಿದೆ. ಸೋಮಶೇಖರ ಗದ್ದೆಯಲ್ಲಿ ಬೆಳೆದ ರಾಗಿಯ ಎಲ್ಲ ಪೈರುಗಳೂ ಇದನ್ನು ಸಾಬೀತುಪಡಿಸುತ್ತಿವೆ. ಸದೃಢ, ಬಲಿಷ್ಠ ಪೈರು, ಗಟ್ಟಿಯಾದ ತೆನೆ ಈ ದೇಸಿ ರಾಗಿ ತಳಿಗಳ ವೈಶಿಷ್ಟ್ಯ. ಪ್ರತಿಯೊಂದು ತಳಿಯ ಗುಣಧರ್ಮವೂ ವಿಶೇಷ. ಅತಿ ಹೆಚ್ಚು ಇಳುವರಿ ಕೊಡುವ ತಳಿ



ಒಂದಾದರೆ, ಮೂರೇ ತಿಂಗಳಲ್ಲಿ ಕೊಯ್ಲಿಗೆ ಬರುವುದು ಇನ್ನೊಂದು ತಳಿ. ಹೆಚ್ಚು ಮೇವು ಕೊಡುವುದು ಮತ್ತೊಂದು ತಳಿ. ಸರಿಯಾದ ಬೇಸಾಯ ಪದ್ಧತಿಗಳನ್ನು ಅನುಸರಿಸಿದರೆ 20 ಕ್ವಿಂಟಲ್‌ವರೆಗೆ ಇಳುವರಿ ತೆಗೆಯಲು ಸಾಧ್ಯ. ಅದು ಇಲ್ಲಿ ಕಾಣುವಂತಿದೆ.

ಕಾವೇರಿ ನೀರನ್ನು ಅವಲಂಬಿಸಿರುವ ರೈತರು ಸಿರಿಧಾನ್ಯಗಳನ್ನು ಮರೆತೇ ಹೋಗಿದ್ದಾರೆ. ಅದರಲ್ಲೂ ನೀರಿದ್ದರೆ ಮಾತ್ರ ಎರಡು ಬೆಳೆ ಭತ್ತ ಬೆಳೆಯುತ್ತಿದ್ದರು. ಆದರೆ ಭೀಕರ ಬರದ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಒಂದು ಬೆಳೆಗೇ ಸಾಹಸ ಮಾಡಬೇಕಾಗಿದೆ. ಹೀಗಾಗಿ ಬೇಸಿಗೆಯಲ್ಲಿ ಗದ್ದೆಯೆಲ್ಲ ಖಾಲಿ ಖಾಲಿ! ಅದರ ಬದಲಿಗೆ ಗದ್ದೆಯಲ್ಲಿನ ತೇವಾಂಶ ಬಳಸಿಕೊಂಡೇ ಸಿರಿಧಾನ್ಯ ಬೆಳೆದವರಿದ್ದಾರೆ. ಅಂತಹ ಯಶಸ್ಸಿನ ಸಾಲಿಗೆ ಸೇರುವ ಶಿವಳ್ಳಿಯ ದೇಸಿ ರಾಗಿ ಪ್ರಯೋಗ ಮತ್ತಷ್ಟು ರೈತರಿಗೆ ಪ್ರೇರಣೆ ನೀಡಬಲ್ಲದು.

**ಸೋಮಶೇಖರ ಬೆಳೆಸಿರುವ 17 ದೇಸಿ ರಾಗಿ ತಳಿಗಳು:**

ಎಡಗು ರಾಗಿ, ಶರಾವತಿ ರಾಗಿ, ರಾಗಳ್ಳಿ ಶಿವಳ್ಳಿ ರಾಗಿ, ಜಗಳೂರು ರಾಗಿ, ಬೆಣ್ಣೆಮುದ್ದೆ ರಾಗಿ, ಹಸಿರುಕಡ್ಡಿ ರಾಗಿ, ಬೋಂಡಾ ರಾಗಿ, ಉಂಡೆ ರಾಗಿ, ಗಿಡ್ಡ ರಾಗಿ, ಅಯ್ಯನ ರಾಗಿ, ಕೆಂಪು ರಾಗಿ, ಗೋಟಿಗಡ್ಡೆ ರಾಗಿ, ನಾಗಮಲೆ ರಾಗಿ, ಗುಟ್ಟೆ ರಾಗಿ, ಬಿಳಿಗಿಡ್ಡ ರಾಗಿ, ಕರಿಗಿಡ್ಡ ರಾಗಿ, ಕೋಣಕೊಂಬಿನ ರಾಗಿ.

**ಮಾಹಿತಿಗೆ:** 9742195387 (ರಾತ್ರಿ 7:30 ರಿಂದ 9:30 ಮಾತ್ರ)

(ಕೃಪೆ : ಪ್ರಜಾವಾಣಿ)

## ಸ್ವಾಮಿ ವಿವೇಕಾನಂದ
(ಜನವರಿ 12, 1863 – ಜುಲೈ 4, 1902)



ದಿನಾಂಕ 1892ನೇ ಸೆಪ್ಟೆಂಬರ 11 ಈ ದಿನದ ಘಟನೆ ಭಾರತೀಯರ ಪಾಲಿಗೆ ಹೆಮ್ಮೆಯ ದಿನ. ಸ್ಥಳ ಚಿಕಾಗೋ, ಸಂದರ್ಭ ಸರ್ವಧರ್ಮ ಸಮ್ಮೇಳನದ ಪ್ರಾರಂಭದ ದಿನ. ಅಂದಿನ ದಿನದ ಕೊನೆಯ ಭಾಷಣಕಾರರಾಗಿ ವೇದಿಕೆಯ ಮೇಲೆ ಬಂದು ನಿಂತರು ಸ್ವಾಮಿ ವಿವೇಕಾನಂದರು. ಅವರಾಡಿದ ಮೊದಲೆರೆಡು ವಾಕ್ಯಗಳಿಗೇ ಇಡೀ ಸಭೆಯಲ್ಲಿ ಎರಡು ನಿಮಿಷಗಳ ಎಡೆಬಿಡದ ಕರತಾಡನ ಕೇಳಿ ಬಂತು. 'ಅಮೇರಿಕಾದ ಸೋದರ ಸೋದರಿಯರೇ' ಎಂಬ ಪ್ರೀತಿಯ ಸಂಬೋಧನೆಯೇ ಈ ಪ್ರಚಂಡ ಪ್ರಭಾವವನ್ನುಂಟು ಮಾಡಿತು. ಸ್ವಾಮಿ ವಿವೇಕಾನಂದರು ಮಾಡಿದ ಮೊದಲನೆಯ ಆಶುಭಾಷಣವೇ ಅಲ್ಲಿ ನೆರೆದಿದ್ದವರ ಹೃದಯವನ್ನು ಗೆದ್ದುಬಿಟ್ಟಿತು. ಈ ಘಟನೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಿಂದೂಧರ್ಮದ ಬಗೆಗೆ ಆಸಕ್ತಿಯನ್ನೂ ಹೆಚ್ಚಿಸಿತು. 'ಪೂರ್ವ ದೇಶದ ವಿಚಿತ್ರ ಧರ್ಮ' ಎಂದು ಪರಿಗಣಿತವಾಗಿದ್ದ ಹಿಂದೂ ಧರ್ಮದ ತಾತ್ತ್ವಿಕ ಹಾಗೂ ಧಾರ್ಮಿಕ ಮೂಲಭೂತ ಮಹತ್ತ್ವವುಳ್ಳ ಸಂಪ್ರದಾಯಗಳು, ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಗುರುತಿಸಲ್ಪಟ್ಟವು. ಈ ಘಟನೆಯ ನಂತರ ಮುಂದಿನ ಕೆಲವು ವರ್ಷಗಳಲ್ಲಿ 'ನ್ಯೂಯಾರ್ಕ್' ಮತ್ತು 'ಲಂಡನ್' ನಗರಗಳಲ್ಲಿ ವೇದಾಂತ ಕೇಂದ್ರಗಳನ್ನು ಸ್ಥಾಪಿಸಿದ ವಿವೇಕಾನಂದರು ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಹಿಂದೂ ಧರ್ಮ ಮತ್ತು ವೈದಿಕ ತತ್ತ್ವಜ್ಞಾನದ ಕುರಿತು ಭಾಷಣಗಳನ್ನು ಮಾಡಿದರು. ಶ್ರೀ ಅ.ನ.ಕೃ. ಅವರ ಮಾತುಗಳಲ್ಲಿ ಹೇಳುವುದಾದರೆ, 'ಹಿಂದೂಸ್ಥಾನದ ಬಡ ಸಂನ್ಯಾಸಿ ಅಮೇರಿಕೆಯ ಆರಾಧ್ಯಮೂರ್ತಿಯಾದ'.

ರಾಮಕೃಷ್ಣ ಪರಮಹಂಸರ ಶಿಷ್ಯರಾಗಷ್ಟೇ ಅಲ್ಲದೇ ತಮ್ಮದೇ ಶೈಲಿಯಲ್ಲಿ ದೊಡ್ಡ ಚಿಂತಕರಾಗಿ ವಿವೇಕಾನಂದರು ಪ್ರಖ್ಯಾತರು. ಅವರ ಮುಖ್ಯ ಕಾಣಿಕೆಯೆಂದರೆ ಭಾರತದ ತತ್ತ್ವಶಾಸ್ತ್ರ ಅದರಲ್ಲೂ ಅದ್ವೈತ ಸಿದ್ಧಾಂತವು ಕೇವಲ ತಾತ್ತ್ವಿಕವಾಗಿ ಉಚ್ಚ ತತ್ತ್ವಜ್ಞಾನ ಮಾತ್ರವಲ್ಲದೆ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದಲೂ ಉಪಯುಕ್ತ ಎಂಬುದನ್ನು ತೋರಿಸಿಕೊಟ್ಟಿದ್ದು. ಅವರ ಅಭಿಪ್ರಾಯದಲ್ಲಿ 'ಎಲ್ಲರಲ್ಲಿಯೂ ದೇವರಿದ್ದಾನೆ'. ಇದೇ ಅವರ ಮಂತ್ರವಾಯಿತು ಮತ್ತು ದರಿದ್ರ ನಾರಾಯಣ ಸೇವೆಯೇ ಆಧ್ಯಾತ್ಮದ ಮೊದಲ ಹೆಜ್ಜೆ ಎಂಬ ಕಲ್ಪನೆಗೆ ದಾರಿ ಮಾಡಿ ಕೊಟ್ಟಿತು. ಅದರಂತೆ ರಾಮಕೃಷ್ಣ ಮಿಶನ್ ಸ್ಥಾಪಿಸಿ ಅದರ ಮೂಲಕ ಬಡಜನರ ಸೇವೆಯಲ್ಲಿಯೇ ದೇವರ ಸೇವೆಯನ್ನು ಮಾಡುವ ದಾರಿಯನ್ನು ಅವರು ಪಾಲಿಸಿದರು. ಎಲ್ಲರಲ್ಲಿಯೂ ದೇವರಿದ್ದು ಎಲ್ಲರೂ ಸಮಾನರೆಂದಾದ ಮೇಲೆ ಕೆಲವರಿಗೆ ಮಾತ್ರ ಏಕೆ ಹೆಚ್ಚು ಬೆಲೆ ಬರಬೇಕು ಎಂಬ ಪ್ರಶ್ನೆಯನ್ನು ವಿವೇಕಾನಂದರು ಕೇಳಿಕೊಂಡರು. ಅವರ ಅಂತಿಮವಾದ ತೀರ್ಮಾನವೆಂದರೆ ಭಕ್ತನು ಮೋಕ್ಷವನ್ನು ಅನುಭವಿಸಿದಾಗ ನಮ್ಮಲ್ಲಿರುವ ಎಲ್ಲ ಭೇದಗಳೂ ಮಾಯವಾಗಿ, ಉಳಿಯುವುದೆಂದರೆ ಬ್ರಹ್ಮನೊಂದಿಗೆ ತಮ್ಮ ಐಕ್ಯವನ್ನು ಅರಿಯದ ಮತ್ತು ಕೆಳತುಳಿಯಲ್ಪಟ್ಟಿರುವ ಜನರ ಬಗೆಗೆ ಸಂತಾಪ ಮತ್ತು ಅವರಿಗೆ ಸಹಾಯ ಮಾಡುವ ಸದೃಢ ನಿಶ್ಚಯ.

ವಿವೇಕಾನಂದರು ಭಾರತದ ತತ್ತ್ವಜ್ಞಾನ, ಯೋಗ, ವೇದಾಂತ ಇವೆಲ್ಲವನ್ನು ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರ ಮಾಡಿದರು. ನೂರಕ್ಕೂ ಹೆಚ್ಚು ಖಾಸಗಿ ಸಂಸ್ಥೆಗಳಲ್ಲಿ ತಮ್ಮ ವಿಚಾರಧಾರೆಯನ್ನು ಹರಿಸಿದರು. ದೇಶ ವಿದೇಶಗಳಲ್ಲಿ ಹಿಂದುಧರ್ಮದ ತತ್ತ್ವವನ್ನು ಭೋಧಿಸಿದರು. ಅವರು ಪ್ರಪಂಚದಾದ್ಯಂತ ಪ್ರಯಾಣಿಸಿ, ಅಲ್ಲಿನ ಭಕ್ತರನ್ನುದ್ದೇಶಿಸಿ ಮಾಡಿದ ಭಾಷಣಗಳನ್ನು ಒಟ್ಟುಗೂಡಿಸಿ ಬರೆಯಲ್ಪಟ್ಟ ಅವರ ನಾಲ್ಕು ಪುಸ್ತಕಗಳು ಹಿಂದೂ ಧರ್ಮದ ಯೋಗ ಸಿದ್ಧಾಂತವನ್ನು ತಿಳಿಯಬಯಸುವವರಿಗೆ, ಮೂಲಭೂತ ಪಠ್ಯಗಳೆಂದೇ ಪರಿಗಣಿತವಾಗಿವೆ. ನಮ್ಮಲ್ಲಿ ಎಲ್ಲರೂ ಮುಕ್ತರಾಗುವವರೆಗೆ ಯಾರೊಬ್ಬರೂ ಮುಕ್ತರಾಗಲಾರರೆಂಬುದು ವಿವೇಕಾನಂದರ ನಂಬಿಕೆಗಳಲ್ಲಿ ಮುಖ್ಯವಾದುದು.

ಜುಲೈ 4 ನವಭಾರತದ ಪುನರುತ್ಥಾನದ ಪ್ರವರ್ತಕ ಸ್ವಾಮಿ ವಿವೇಕಾನಂದರ ಪುಣ್ಯತಿಥಿ.

**ಸಂಪಾದಕೀಯ ಸಹಕಾರ** ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಸುಮಂತ್, ಶ್ರೀನಿವಾಸ ಹೆಗಡೆ, ಡಾ. ನಾಗರಾಜ ಶೆಣೈ, ಪ್ರತಾಪ ಕೊಡಂಚ, ಶ್ರೀವತ್ಸ ಸಿ.ಎಂ., ರಾಧಾಕೃಷ್ಣ ಹೊಳ್ಳ, ಸತ್ಯಾನಾರಾಯಣ ಶಾನಭಾಗ್




ದುಬಾರಿ ವೆಚ್ಚದ ಹಾಗು 18 ಕೆ.ಜಿ ಭಾರದ ವಿದೇಶಿ ಗುಂಡುನಿರೋಧಕಗಳನ್ನು ಉಪಯೋಗಿಸುತ್ತಿದ್ದ ಭಾರತೀಯ ಸೇನೆಗೆ ಈಗ ಸಂಪೂರ್ಣ್ ಸ್ವದೇಶಿ ನಿರ್ಮಿತ, ಮೇಕ್ ಇನ್ ಇಂಡಿಯಾದ ಅಡಿಯಲ್ಲಿ ತಯಾರಾದ ಗುಂಡುನಿರೋಧಕ ಸೇರ್ಪಡೆಯಾಗುತ್ತಿದೆ. ಕಡಿಮೆ ವೆಚ್ಚದ, 20 ಪದರಗಳುಳ್ಳ ಈ ಜಾಕೆಟ್ ಕೇವಲ 1.5 ಕೆ.ಜಿ ಭಾರವಿದೆ. ಯುದ್ಧಭೂಮಿಯಲ್ಲಿ ಸೈನಿಕರ ಭಾರವನ್ನು ಹಗುರಗೊಳಿಸುವುದಲ್ಲದೇ ಈ ಸ್ವದೇಶೀ ಬುಲೆಟ್ ಪ್ರೂಫ್ ಜಾಕೆಟ್‌ಗಳಿಂದ ಸೇನೆಯ ಬೊಕ್ಕಸಕ್ಕೆ 20000 ಕೋಟಿಗಳಷ್ಟು ಉಳಿತಾಯವಾಗಲಿದೆ. ಅಮೇರಿಕದಿಂದ ಖರೀದಿಸುವ ಜಾಕೆಟ್ ಬೆಲೆ 1.5 ಲಕ್ಷವಿದ್ದರೆ ಸ್ವದೇಶಿ ಜಾಕೆಟ್ ಬೆಲೆ ಕೇವಲ 50 ಸಾವಿರ ರೂಪಾಯಿಗಳು. ಕೊಯಮತ್ತೂರು ಮೂಲದ ಅಮೃತ ವಿಶ್ವವಿದ್ಯಾನಿಲಯದ ಡಾ॥ ಶಂತನು ಭೌಮಿಕ್ ಅವರು ಇದರ ವಿನ್ಯಾಸಕರು.



**ಇರುವ ಕಾಡನ್ನೇ ನಾಶಮಾಡುತ್ತಿರುವ ಈಗಿನ ಕಾಲಮಾನದಲ್ಲಿ ಕಾಸರಗೋಡಿನ ಪುಲಿಯಂಕುಲಮ್ ಪರಪ್ಪ ಹೆಸರಿನ ಗ್ರಾಮದ ಅಬ್ದುಲ್ ಕರೀಮ್ ಎನ್ನುವವರು ಸ್ವತಃ ತಾವೇ 32 ಎಕರೆ ಜಮೀನನ್ನು ಖರೀದಿ ಮಾಡಿ ಈ ಜಾಗದಲ್ಲಿ ಹೊಸ ಕಾಡನ್ನೇ ಸೃಷ್ಟಿ ಮಾಡಿದ್ದಾರೆ. ಸುಮಾರು 1977ರ ಸುಮಾರಿಗೆ ಈ ಪ್ರದೇಶದಲ್ಲಿ ಬರಡು ಭೂಮಿಯನ್ನು ಕಂಡ ಕರೀಮ್ 3 ಎಕರೆ ಜಾಗವನ್ನು ಆಗಿನ ದರದಲ್ಲಿ 3750 ರೂ. ಕೊಟ್ಟು ಖರೀದಿಸಿದರು. ಈ ಜಾಗದಲ್ಲಿ ಗಿಡಗಳನ್ನು ನೆಟ್ಟು ಬೆಳೆಸಲಾರಂಭಿಸಿದರು. ಮುಂದಿನ 2–3 ವರ್ಷಗಳಲ್ಲಿ ಇನ್ನೂ 27 ಎಕರೆ ಖರೀದಿಸಿ ಕಾಡು ಬೆಳೆಸುವ ಕಾರ್ಯವನ್ನು ವಿಸ್ತರಿಸಿದರು. ನೆಟ್ಟ ಸಸಿಗಳಿಗೆ ನೀರಿನ ಕೊರತೆಯಾಗಿದ್ದರಿಂದ ತಮ್ಮ ದ್ವಿಚಕ್ರವಾಹನದಲ್ಲಿ ನೀರನ್ನು ತಂದು ಉಣಿಸಿದರು. ಇವರ ಸತತ ಪ್ರಯತ್ನದಿಂದಾಗಿ ಬರಡಾಗಿದ್ದ 32 ಎಕರೆ ಹಚ್ಚಹಸುರಿನ ಕಾಡಾಗಿ ಇಂದು ಎದ್ದು ನಿಂತಿದೆ. ಪರಿಣಾಮ, ಮೊದಲು ನೀರಿನ ಕೊರತೆಯಿದ್ದ ಸುತ್ತಲಿನ 10 ಕಿ.ಮೀ. ವಿಸ್ತೀರ್ಣದ ಜಾಗದಲ್ಲೂ ಈಗ ಸ್ವಚ್ಛ ಹಾಗೂ ಸಮೃದ್ಧವಾದ ನೀರು ದೊರೆಯುತ್ತಿದೆ.**

ಸತತ ಬರಗಾಲಗಳಿಂದ ಬತ್ತಿಹೋಗಿದ್ದ ಮಂಡ್ಯ ತಾಲೂಕಿನ 12 ಗ್ರಾಮಗಳಲ್ಲಿ ಕೆರೆಗಳ ಕಾಯಕಲ್ಪ ನಡೆಯುತ್ತಿದೆ. ಇಲ್ಲಿನ ತಹಸೀಲ್ದಾರರಾದ ಮಾರುತಿ ಪ್ರಸನ್ನ ಅವರು ಸ್ವತಃ ತಾವೇ ಜನರ ಮನವೊಲಿಸಿ ಗ್ರಾಮಸ್ಥರ ಸಹಕಾರದಿಂದ ಕೆರೆ ಅಭಿವೃದ್ಧಿ ಅಭಿಯಾನಕ್ಕೆ ಮುಂದಾಗಿದ್ದಾರೆ. ಗ್ರಾಮಗಳಲ್ಲಿ ಕೆರೆ ಅಭಿವೃದ್ಧಿ ಸಮಿತಿಗಳನ್ನು ರಚಿಸಿ ಹಣಸಂಗ್ರಹಿಸಿ, ಸರ್ಕಾರಿ ಅನುದಾನದ ಜೊತೆ ಸೇರಿಸಿ ಕಾಮಗಾರಿ ನಿರ್ವಹಿಸುತ್ತಿದ್ದಾರೆ. ಪ್ರಸನ್ನ ಅವರ ಪ್ರಯತ್ನದಿಂದ ಗ್ರಾಮಸ್ಥರೂ ಕೆರೆ ಅಭಿವೃದ್ಧಿ ಕಾರ್ಯದಲ್ಲಿ ಭಾಗಿಯಾಗುತ್ತಿದ್ದಾರೆ. ಮಾರುತಿ ಪ್ರಸನ್ನ ಅವರ ಜನಪರ ಕಾಳಜಿ ಸರ್ಕಾರಿ ಅಧಿಕಾರಿಗಳಿಗೆ ಮಾದರಿಯಾಗಿದೆ.

**ಮತಾಂಧ ಟಿಪ್ಪುವಿನ ಆಕ್ರಮಣಕ್ಕೆ ಒಳಗಾಗಿ ಸುಮಾರು 250 ವರ್ಷಗಳಿಂದ ಜೀರ್ಣಾವಸ್ಥೆಯಲ್ಲಿದ್ದ ದೇವಸ್ಥಾನವೊಂದನ್ನು ಸ್ವತಃ ಗ್ರಾಮಸ್ಥರೇ ಹಣ ಹಾಕಿ ಪುನರ್ ಪ್ರತಿಷ್ಠಾಪನೆ ಮಾಡಿದ್ದಾರೆ. ಈ ಘಟನೆ ನಡೆದಿರುವುದು ಮಡಿಕೇರಿಯ ಪೊನ್ನಂಪೇಟೆ ಸಮೀಪದ ನಡಿಕೇರಿಯಲ್ಲಿ. ಸುಮಾರು 800 ವರ್ಷಗಳ ಇತಿಹಾಸವಿರುವ ಈ ಗೋವಿಂದ ಸ್ವಾಮಿ ದೇವಸ್ಥಾನವನ್ನು 1885ರ ಸುಮಾರಿಗೆ ಟಿಪ್ಪು ಆಕ್ರಮಣ ಮಾಡಿ ವಿಗ್ರಹಭಂಜನೆ ಮಾಡಿದ್ದ. ಇದೀಗ ದೇವಸ್ಥಾನ ಜೀರ್ಣೋದ್ಧಾರವಾಗಿ ಲೋಕಾರ್ಪಣೆಯಾಗಿದೆ. ಈ ದೇವಸ್ಥಾನದ ಲೋಕಾರ್ಪಣೆಯು ಮತಾಂಧ ಕ್ರೌರ್ಯದ ವಿರುದ್ಧ ಪ್ರಕಟವಾದ ಸ್ವಾಭಿಮಾನದ ಸಂಕೇತ ಎಂಬುದು ಊರವರ ಭಾವನೆಯಾಗಿದೆ.**



ಬೆಂಗಳೂರಿನ ಇಂದಿರಾನಗರದ ನ್ಯಾಶನಲ್ ಪಬ್ಲಿಕ್ ಶಾಲೆಯಲ್ಲಿ ಓದುತ್ತಿರುವ 17 ವರ್ಷದ ಆರ್ಯ ಪುದೋಟ ಎಂಬುವವನು ಸಾವಯವ ಕೃಷಿಗೆ ಆಕರ್ಷಿತನಾಗಿದ್ದಾನೆ. ತಮ್ಮ ಅಜ್ಜ–ಅಜ್ಜಿಯರು ಕೃಷಿಯನ್ನೇ ಅವಲಂಬಿಸಿರುವುದರಿಂದ ಸಹಜವಾಗಿ ಕೃಷಿಯೆಡೆಗೆ ಒಲವು ಆರ್ಯನಿಗಿತ್ತು. ಈತನ ಹಸಿ ಕಸ ವಿಲೇವಾರಿ, ಮನೆಯಲ್ಲೇ ಗೊಬ್ಬರ ಮಾಡುವ ಬಗೆ, ಸಾವಯವ ವಿಧಾನದಲ್ಲಿ ಮನೆಯಲ್ಲೇ ತರಕಾರಿ ಬೆಳೆಯುವ ಬಗ್ಗೆ ಹಲವು ಉಪನ್ಯಾಸ ವಿಡಿಯೋಗಳು ಯೂಟ್ಯೂಬ್ ಜಾಲತಾಣದಲ್ಲಿ (ಮೈ ಆರ್ಗ್ಯಾನಿಕ್ ಫಾರ್ಮ್ ವಾಹಿನಿಯಲ್ಲಿ) ಲಭ್ಯ. ಅಲ್ಲದೇ, ತಾನು ಓದುವ ಶಾಲೆಯಲ್ಲಿ ಉತ್ತೇಜನ ಸಿಗುತ್ತಿರುವ ಈ ಕೆಲಸವನ್ನು ಇತರ ಶಾಲೆಗಳಲ್ಲೂ ನಡೆಸಬೇಕೆಂಬ ಹೆಬ್ಬಯಕೆಯಿಂದ ಕಾರ್ಯನಿರ್ವಹಿಸುತ್ತಿದ್ದಾನೆ. ಈ ಪೋರ ಸ್ವ–ಇಚ್ಛೆಯಿಂದ ಸಸಿಗಳನ್ನು ಜನರಿಗೆ ನೀಡುತ್ತಾ ಮನೆಗಳಲ್ಲಿ, ಸ್ಥಳಾವಕಾಶವಿದ್ದಲ್ಲಿ ಗಿಡ ಬೆಳೆಯಲು ಪ್ರೇರೇಪಿಸುತ್ತಿದ್ದಾನೆ.



**ಹಕ್ಕಿಗಳ ಸಾವು, ಆಹಾರ ಸಮಸ್ಯೆಗಳನ್ನು ತಮ್ಮ ಮಟ್ಟದಲ್ಲಿ ನೀಗಿಸಲು ಕೋಲ್ಕತ್ತಾದ ಶಾಲಾ ಮಕ್ಕಳು ತಾವು ಜೋಡಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಯೊಂದಿಗೆ ಸೇರಿ ಮನೆಯಲ್ಲಿ ತ್ಯಾಜ್ಯವೆನಿಸುವ ರಟ್ಟಿನಪೆಟ್ಟಿಗೆ, ಬಾಟಲಿಗಳನ್ನು ಬಳಸಿ ಹಕ್ಕಿಗಳ ಗೂಡಿಗೆ ಹೆಚ್ಚಿನ ಭದ್ರತೆ, ಆಹಾರ ಭರಿಸುವ ಉಪಕರಣಗಳನ್ನು ತಯಾರಿಸಿದ್ದಾರೆ. ಈ ಪ್ರಯತ್ನದ ಯಶಸ್ಸನ್ನು ಕಂಡು ಅದನ್ನು ಅನುಕರಿಸಲು ಹಲವಾರು ಮಂದಿ ಮುಂದಾಗಿದ್ದಾರೆ.**

ಟಿಕೆಟು ಪಡೆದ ನಂತರ ಹಣ ಪಾವತಿಸುವ ಹೊಸ ವಿಧಾನವನ್ನು ಭಾರತೀಯ ರೈಲ್ವೇ ಸದ್ಯದಲ್ಲಿಯೇ ಜನರ ಮುಂದಿಡಲಿದೆ. ಗ್ರಾಹಕರ ಆರ್ಥಿಕ ವ್ಯವಹಾರ ಆಧರಿಸಿ ಕ್ರೆಡಿಟ್ ಕಾರ್ಡ್ ನೀಡುವಂತೆ, ಆಯ್ದ ವಿಶ್ವಾಸಾರ್ಹ ಗ್ರಾಹಕರಿಗೆ ಈ ಸೌಲಭ್ಯ ದೊರಕಲಿದೆ. ಟಿಕೆಟ್ ಖರೀದಿಸಿದ ಬಳಿಕ ಹಣ ಪಾವತಿಗೆ 14 ದಿನಗಳ ಗಡುವನ್ನು ನೀಡುವುದಾಗಿ ಭಾರತೀಯ ರೈಲು ತಿಳಿಸಿದೆ.

## ಸಾಲುದ್ದದ ಸುದ್ದಿಗಳು



**ರಾಜಸ್ಥಾನದ ಜೋಧಪುರದಲ್ಲಿ ಮಾರ್ವಾರ್ ಮುಸ್ಲಿಮರ ಕಲ್ಯಾಣ ಸಮಾಜ 2004ರಿಂದ ಗೋಶಾಲೆಯನ್ನು ನಡೆಸುತ್ತಿದ್ದು ಅದೊಂದು ಆದರ್ಶ ಗೋಶಾಲೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಊರಿನ ರೈತರು ಸಾಕಲಾಗದೇ ಬರಡಾದ ಹಸು, ಎಮ್ಮೆ, ಕೋಣಗಳು ಕಸಾಯಿಖಾನೆಯ ಪಾಲಾಗದೇ ಈ ಗೋಶಾಲೆಯಲ್ಲಿ ಆಶ್ರಯ ಪಡೆದಿವೆ. ತಮ್ಮಲ್ಲಿರುವ ಹಸುಗಳನ್ನು ನಿರ್ವಹಿಸಲು ತಿಂಗಳಿಗೆ ಒಂದು ಲಕ್ಷ ಖರ್ಚಾಗುತ್ತಿದ್ದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಗೋವುಗಳಿಗೆ ಆಶ್ರಯ ನೀಡಬೇಕೆಂಬ ದೃಷ್ಟಿಯನ್ನು ಸಂಸ್ಥೆ ಇರಿಸಿಕೊಂಡಿದೆ.**

ಇತ್ತೀಚೆಗೆ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರು ಬೆಂಗಳೂರಿಗೆ ಬಂದಿದ್ದಾಗ ಟ್ರಾಫಿಕ್ ಪೋಲಿಸ್ ಕರ್ತವ್ಯ ನಿರ್ವಹಣೆಗೆ ನಿಯೋಜಿತರಾಗಿದ್ದ ಇನ್ಸ್‌ಪೆಕ್ಟರ್ ಎಂ. ಎಲ್. ನಿಜಲಿಂಗಪ್ಪ ಅವರು ಮಾಡಿದ ಕೆಲಸ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ರಾಷ್ಟ್ರಪತಿಯವರ ಕಾರು ಎಂ.ಜಿ. ರಸ್ತೆಯಿಂದ ರಾಜಭವನದ ಕಡೆ ತೆರಳುತ್ತಿರುವಾಗ ಅಂಬುಲೆನ್ಸ್ ಟ್ರಾಫಿಕ್‌ನಲ್ಲಿರುವುದನ್ನು ಗಮನಿಸಿದ ಅವರು ತಕ್ಷಣವೇ ರಾಷ್ಟ್ರಪತಿಯವರ ಕಾರನ್ನು ನಿಲ್ಲಿಸಿ ಅಂಬುಲೆನ್ಸ್‌ಗೆ ಹೋಗಲು ಅನುವು ಮಾಡಿಕೊಟ್ಟರು. ಗಣ್ಯರ ವಾಹನ ಹೋಗಲು ಅನುಕೂಲವಾಗುವಂತೆ ಇತರ ವಾಹನಗಳನ್ನು ತಡೆದು ನಿಲ್ಲಿಸಿದಾಗ ಅಂಬುಲೆನ್ಸ್‌ಗಳಲ್ಲಿರುವ ರೋಗಿಗಳು ಸಂಕಷ್ಟಕ್ಕೊಳಗಾದ ಅನೇಕ ಉದಾಹರಣೆಗಳ ನಡುವೆ ಇವರ ಈ ಕಾರ್ಯ ಪ್ರಶಂಸನೀಯ.

## ಅಟಲ್ ಟಿಂಕರಿಂಗ್ ಲ್ಯಾಬ್

ಕೇಂದ್ರ ಸರಕಾರದ ನೀತಿ ಆಯೋಗ ಶಾಲೆಗಳಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್ ಎಂಬ ವಿನೂತನ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಲ್ಯಾಬೋರೇಟರಿಯನ್ನು ದೇಶಾದ್ಯಂತ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಚಿಂತನೆ ನಡೆಸಲಾಗಿದೆ. ಆಧುನಿಕ ಉಪಕರಣಗಳೊಂದಿಗೆ, ಮಕ್ಕಳಲ್ಲಿನ ಯೋಚನಾ ಲಹರಿಯನ್ನು ಹೆಚ್ಚಿಸಲು ಹಾಗೂ ಹೊಸತನವನ್ನು ಮೂಡಿಸಲು ಇದು ಸಹಕಾರಿಯಾಗಲಿದೆ. ಮೊದಲ ಬಾರಿಗೆ ದೆಹಲಿಯ ಸಲ್ವಾನ್ ಸರಕಾರಿ ವಿದ್ಯಾರ್ಥಿನಿಯರ ಶಾಲೆಯಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಟಿಂಕರಿಂಗ್ ಲ್ಯಾಬ್‌ನಲ್ಲಿ ವಿಡಿಯೋ ಗ್ಯಾಲರಿ, ಚರ್ಚೆಗೆ ಬೇಕಾದ ಉತ್ತಮ ಸ್ಥಳಾವಕಾಶ, ಆಧುನಿಕ ಶೈಲಿಯ ವೈಜ್ಞಾನಿಕ ಉಪಕರಣಗಳನ್ನು ಹೊಂದಿದೆ. ಇದನ್ನು ಸರಿಯಾಗಿ ಅನುಷ್ಠಾನಗೊಳಿಸಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರಲ್ಲಿ ಅನುಮಾನವೇ ಇಲ್ಲ.

## ಭೇದಭಾವರಹಿತ ಸಮಾಜನಿರ್ಮಾಣ ಆರೆಸ್ಸೆಸ್ಸಿನಿಂದ ಸಾಧ್ಯ

– ವಿ. ಶ್ರೀನಿವಾಸ್ ಪ್ರಸಾದ್

ಈ ದೇಶದ ತಥಾಕಥಿತ ದಲಿತನಿಗೆ ಸಮಾಜದೊಳಗೆ ಒಂದಾಗಿ ಬದುಕುವ ಯಾವ ಸಮಾಜದ ಕನಸನ್ನು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಕಂಡಿದ್ದರೋ, ಅಂತಹ ಸಮಾಜನಿರ್ಮಾಣ ಕೇವಲ ಆರೆಸ್ಸೆಸ್ಸಿನಿಂದ ಸಾಧ್ಯ ಎಂಬುದು ನನ್ನ ನಂಬಿಕೆ ಎಂದು ಮಾಜಿ ಸಚಿವ, ದಲಿತ ನಾಯಕ ವಿ ಶ್ರೀನಿವಾಸ್ ಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.




ಮೈಸೂರಿನಲ್ಲಿ 'ಸಾಮರಸ್ಯ' ವೇದಿಕೆ ಆಯೋಜಿಸಿದ್ದ ಸ್ನೇಹಮಿಲನ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಭಾವಪೂರ್ಣವಾಗಿ ಮಾತನಾಡಿದ ಶ್ರೀನಿವಾಸ್ ಪ್ರಸಾದ್, ಚಿಕ್ಕಂದಿನಿಂದಲೂ ತಾನು ಸಂಘದ ಸ್ವಯಂಸೇವಕನಾಗಿ ಬೆಳೆದಿದ್ದರಿಂದ, ಸಂಸ್ಕಾರಯುತ ಗುಣಗಳು ತಮ್ಮಲ್ಲೂ ಬೆಳೆದಿವೆ ಎಂದಿದ್ದಾರೆ. ಸಂಘದ ಬಗ್ಗೆ ಡಾ. ಅಂಬೇಡ್ಕರ್ ಅವರಿಗೆ ಇದ್ದ ಅಭಿಪ್ರಾಯ ಹಾಗು ಅಸ್ಪೃಶ್ಯತೆಯನ್ನು ತೊಡೆದುಹಾಕುವಲ್ಲಿ ಸಂಘ ಮತ್ತು ಇತರ ಸಂಘಪ್ರೇರಿತ ಸಂಘಟನೆಗಳು ಮಾಡಿರುವ ಕೆಲಸಗಳ ಬಗ್ಗೆ ಉಪನ್ಯಾಸ ನೀಡಲಾಗಿತ್ತು.

**ಮೇಕ್ ಇನ್ ಇಂಡಿಯಾ ಯೋಜನೆಯ ಅಂಗವಾಗಿ ಮಹತ್ತ್ವದ ಯೋಜನೆಯೊಂದಕ್ಕೆ ಈಗ ಅಂಕಿತ ಬಿದ್ದಿದೆ. ದೇಶದ ವಾಯುಪಡೆಗೆ ಬಲ ನೀಡುವ ಎಫ್–16 ಯುದ್ಧವಿಮಾನವನ್ನು ಭಾರತದಲ್ಲೇ ತಯಾರಿಸಲು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಮತ್ತು ಲಾಕ್‌ಹೀಡ್ ಮಾರ್ಟಿನ್ ಸಂಸ್ಥೆಗಳು ಒಪ್ಪಂದ ಮಾಡಿಕೊಂಡಿವೆ. ಇದರಿಂದ ರಕ್ಷಣಾ ಉಪಕರಣಗಳ ಆಮದಿಗೆ ಮಾಡುವ ಖರ್ಚು ಸ್ವಲ್ಪ ಮಟ್ಟಿಗೆ ಕಡಿಮೆಯಾಗಲಿದೆ ಮತ್ತು ನಮ್ಮ ದೇಶದ ಯುವಕರಿಗೆ ಉದ್ಯೋಗ ದೊರೆಯಲಿದೆ.**

ಕೇರಳದ ಮಲ್ಲಪುರಂ ಜಿಲ್ಲೆಯ ವಜಕ್ಕಾಡ್‌ನಲ್ಲಿರುವ ವಲಿಯಾ ಜುಮಾ ಮಸೀದಿ ಶಬ್ದಮಾಲಿನ್ಯ ತಡೆಯುವ ನಿಟ್ಟಿನಲ್ಲಿ ಪ್ರಾರ್ಥನೆಯ ಸಮಯದಲ್ಲಿ ದಿನಕ್ಕೆ ಒಂದೇ ಬಾರಿ ಧ್ವನಿವರ್ಧಕ ಬಳಸುವ ನಿರ್ಧಾರ ಕೈಗೊಂಡಿದೆ. ಶಾಲೆ, ಆಸ್ಪತ್ರೆಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ದೂರು ಬಂದಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಸುತ್ತಲಿನ ಇತರ 17 ಮಸೀದಿಗಳೂ ಇದೇ ಕ್ರಮ ಕೈಗೊಂಡಿವೆಯೆಂದು ತಿಳಿದುಬಂದಿದೆ.

## ಜಾಗತಿಕ ಪರಿಸರ ಸಂರಕ್ಷಣೆಗೆ ಭಾರತದ ಬದ್ಧತೆ

**ಭಾರತದ ಚೊಚ್ಚಲ ಜೈವಿಕ ಇಂಧನ ಉತ್ಪಾದನಾ ಕೇಂದ್ರ ಅಸ್ಸಾಂನಲ್ಲಿ ಕೆಲವೇ ದಿನಗಳಲ್ಲಿ ಆರಂಭವಾಗಲಿದೆ. ಇದರ ಹೆಸರು ನುಮಲಿಗರ್ ರಿಫೈನರಿ ಲಿಮಿಟೆಡ್. ಅರುಣಾಚಲ ಪ್ರದೇಶದಲ್ಲಿ ಹೇರಳವಾಗಿ ಸಿಗುವ ಬಿದಿರನ್ನು ಬಳಸಿಕೊಂಡು ಜೈವಿಕ ಇಂಧನವನ್ನು ತಯಾರು ಮಾಡಲಿದೆ ಈ ಸಂಸ್ಥೆ. ವರ್ಷಕ್ಕೆ 3 ಲಕ್ಷ ಟನ್ ಬಿದಿರು ಒದಗಿಸುವ ಬಗ್ಗೆ ಅರುಣಾಚಲದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಅರುಣಾಚಲ ಪ್ರದೇಶದಲ್ಲಿ ಹೇರಳವಾಗಿರುವ ಬಿದಿರನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳಲಿರುವ ಈ ಯೋಜನೆ ಯಶಸ್ವಿಯಾದಲ್ಲಿ ಭಾರತದ ಆರ್ಥಿಕ ಅಭಿವೃದ್ಧಿಗೆ ಹೊಸ ಆಯಾಮ ಸಿಗಲಿದೆ. ಅಷ್ಟೇ ಅಲ್ಲ, ಗ್ರಾಮೀಣ ಭಾಗದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ರೂಪಿಸಲು ಒಂದು ಮಾದರಿಯಾಗಲಿದೆ.**

ಪುಂಗವ PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2015-17

FORTNIGHTLY 1-7-2017



# ರೋಹಿಂಗ್ಯಾ ನಿರಾಶ್ರಿತರಿಂದ ರಾಷ್ಟ್ರದ ಸುರಕ್ಷತೆಗೆ ಆತಂಕ!

ಈಗಲೂ ಅಂಗಿ ಎತ್ತಿ ತನಗಾಗಿರುವ ಗಾಯವನ್ನು ತೋರಿಸಿ ಅಂದಿನ ಭೀಕರತೆ ನೆನಸಿಕೊಳ್ಳುವ ಯೂನಸ್, ತಾನು 4 ವರ್ಷದ ಹಿಂದೆ ಬರ್ಮಾದ ಜುಂಟಾ ಪ್ರಾಂತ್ಯದಿಂದ ಜಮ್ಮುವಿಗೆ ಗುಳೆ ಬಂದೆ ಎನ್ನುತ್ತಾನೆ. ನಿರಾಶ್ರಿತರ ನೆಲೆಯಲ್ಲಿ ರೋಹಿಂಗ್ಯಾ ಮಕ್ಕಳಿಗೆ ಮದರಸಾ ನಡೆಸುತ್ತಿರುವ ಮೌಲಾನಾ ಶಫೀಕ್ ಪ್ರಕಾರ 2015 ರಲ್ಲಿ ನಡೆದ ಜನಾಂಗೀಯ ನರಮೇಧ, ಅತ್ಯಾಚಾರದಂಥ ಅಮಾನವೀಯ ಹಿಂಸೆ ತಾಳಲಾರದೆ 40 ಲಕ್ಷ ರೋಹಿಂಗ್ಯಾ ಜನರ ಪೈಕಿ 30 ಲಕ್ಷ ಜನರು ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಗುಳೆ ಹೋಗಿದ್ದಾರೆ ಮತ್ತು ಅಲ್ಲೇ ಉಳಿದ ರೋಹಿಂಗ್ಯಗಳ ಬದುಕಿನ್ನೂ ನರಕ ಸದೃಶ ಎನ್ನುತ್ತಾನೆ.

ಹೀಗೆ ವಲಸೆ ಬಂದ ಸುಮಾರು 13 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಬರ್ಮಾದ ಸುನ್ನಿ ಮುಸ್ಲಿಮರಾದ ರೋಹಿಂಗ್ಯ ಸಮುದಾಯದವರು ಮತ್ತು ಬಾಂಗ್ಲಾ ನಿರಾಶ್ರಿತರು ನಮ್ಮ ದೇಶದ ಜಮ್ಮು ಪ್ರಾಂತ್ಯದಲ್ಲಿ ಇದ್ದಾರೆ ಎಂದು ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಇತ್ತೀಚೆಗೆ ಜಮ್ಮು ವಿಧಾನಸಭೆಯಲ್ಲಿ ಖಚಿತ ಪಡಿಸಿದ್ದಾರೆ. ಬಾತಿಂಡಿಕಾ ಪ್ಲಾಟ್ ಪ್ರದೇಶ ಒಂದರಲ್ಲೇ ಸುಮಾರು 650ಕ್ಕೂ ಹೆಚ್ಚಿನ ರೋಹಿಂಗ್ಯಾ ನಿರಾಶ್ರಿತರು ನೆಲೆ ನಿಂತಿದ್ದಾರೆ. ಇವರಲ್ಲಿ ಬಹಳಷ್ಟು ಮಂದಿ ವಿಶ್ವಸಂಸ್ಥೆಯಿಂದ ಮಾನ್ಯಗೊಂಡ ನಿರಾಶ್ರಿತರ ಸ್ಥಾನಮಾನ ಪಡೆದಿದ್ದರೂ, ಕೆಲ ಮಂದಿ ಯಾವುದೇ ದಾಖಲಾತಿ ಹೊಂದಿಲ್ಲ. ಇತ್ತೀಚಿಗೆ ದಕ್ಷಿಣ ಕಾಶ್ಮೀರ ಪ್ರಾಂತ್ಯದಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಹತರಾದ ಉಗ್ರಗಾಮಿಗಳು ಬಾಂಗ್ಲಾದಿಂದ ಬಂದ ನಿರಾಶ್ರಿತರೆಂದು ಕಂಡುಬಂದಿದೆ. ಹಾಗಾಗಿ ನಿರಾಶ್ರಿತರಾಗಿ ನಮ್ಮ ದೇಶದಲ್ಲಿ ನೆಲೆಕಂಡ ಇವರು ಆಂತರಿಕ ಸುರಕ್ಷತೆಗೆ ಆತಂಕಕಾರಿ ಎಂಬ ಅಭಿಪ್ರಾಯ ರಾಷ್ಟ್ರೀಯ ಸುರಕ್ಷಾತಜ್ಞರ ಚಿಂತಕರ ಚಾವಡಿಯಲ್ಲಿ ಮೂಡಲು ಕಾರಣವಾಗಿದೆ.

ದೌರ್ಜನ್ಯಕ್ಕೆ ತುತ್ತಾಗಿ ಆಹಾರ ಮತ್ತು ನೆಲೆಯಷ್ಟೇ ಮುಖ್ಯ ಉದ್ದೇಶವಾಗಿಸಿಕೊಂಡ ಈ ಜನರನ್ನು ಭಯೋತ್ಪಾದಕ ಸಂಘಟನೆಗಳು ಸುಲಭವಾಗಿ ಮತೀಯ ಜಿಹಾದಿ ವಿಚಾರದಲ್ಲಿ ಬೋಧನೆ ನೀಡಿ ಉಗ್ರ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಸಾಧ್ಯತೆ ದಟ್ಟವಾಗಿದೆ. ಆದ್ದರಿಂದ ಜಮ್ಮು ಕಾಶ್ಮೀರಕ್ಕೆ ವಲಸೆ ಬಂದಿರುವ ರೋಹಿಂಗ್ಯ ಮತ್ತಿತರ ನಿರಾಶ್ರಿತ ಸಮುದಾಯದವರು ಆಂತರಿಕ ಸುರಕ್ಷತೆಗೆ ಅಪಾಯವೆನಿಸುವ ಟೈಮ್ ಬಾಂಬ್ ನಂತೆ ಗೋಚರಿಸುತ್ತಿದ್ದಾರೆ ಎಂಬುದು ಆತಂಕಕಾರಿ ವಿಷಯ.

## ಆರೆಸ್ಸೆಸ್ ಶಾಖೆಯಲ್ಲಿ ಪ್ರೇರಣೆ ಪಡೆದು ಐಐಟಿ ಪ್ರವೇಶ ಪಡೆದ ಕೂಲಿ ಕಾರ್ಮಿಕನ ಮಗ



ಆರಸ್ಸೆಸ್ ಶಾಖೆಯಲ್ಲಿ ಐಐಟಿ ಪ್ರವೇಶ ಪರೀಕ್ಷೆಯ ಬಗ್ಗೆ ತಿಳಿದುಕೊಂಡು ಪ್ರೇರಣೆ ಪಡೆದ ರಾಜಸ್ಥಾನದ ಜೋಧಪುರ ಸಮೀಪದ ಓಸಿಯನ್ ತೆಹಸೀಲ್‌ನ ಭೀಮಸಾಗರ ಗ್ರಾಮದ ದಿನಗೂಲಿ ಕಾರ್ಮಿಕರ ಮಗ ಪರೀಕ್ಷೆಯಲ್ಲಿ ಯಶಸ್ಸು ಪಡೆದು ಪ್ರತಿಷ್ಠಿತ ಐಐಟಿ ಪ್ರವೇಶಕ್ಕೆ ಅರ್ಹತೆ ಪಡೆದ ಘಟನೆ ವರದಿಯಾಗಿದೆ. ಐಐಟಿ ಪ್ರವೇಶ ಪರಿಕ್ಷೆ ಬರೆಯುವ 13 ಲಕ್ಷ ವಿದ್ಯಾರ್ಥಿಗಳ ಪೈಕಿ 7497ನೇ ರ್‍ಯಾಂಕ್ ಪಡೆದ ಬಲದೇವ್ ಬಿಶ್ನೊಯ್ ಪಾಲಕರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರಾಗಿದ್ದು ಕಡುಬಡತನದ ನಡುವೆ ಸಾಲಸೋಲ ಮಾಡಿ ಮಗನ ವಿದ್ಯಾಭ್ಯಾಸವನ್ನು ಪೋಷಿಸಿದ್ದಾರೆ. ಅವರ ಊರಿನ ಸುತ್ತಲಿನ 100 ಗ್ರಾಮಗಳ ಪೈಕಿ ಇಂಜಿನಿಯರ್ ಆಗುತ್ತಿರುವ ಮೊದಲ ವಿದ್ಯಾರ್ಥಿ ಬಲದೇವ್ ಐಐಟಿ ಪರೀಕ್ಷೆಯ ತರಬೇತಿಗಾಗಿ ಪ್ರಸಿದ್ಧವಾಗಿರುವ ರಾಜಸ್ಥಾನದ ಕೋಟದಲ್ಲಿ ತರಬೇತಿ ಪಡದಿದ್ದಾನೆ. "ನನ್ನ ಊರಿಗೆ ಹತ್ತಿರವಿರುವ ಓಸಿಯನ್‌ನಲ್ಲಿ 11ನೇ ಇಯತ್ತೆ ಓದುತ್ತಿರುವಾಗ ಆರೆಸ್ಸೆಸ್ ಶಾಖೆ ಸೇರಿದ್ದು ನನ್ನ ಜೀವನ ಬದಲಿಸುವ ನಿರ್ಣಯವಾಗಿದೆ. ಆರೆಸ್ಸೆಸ್ ಶಾಖೆಯಲ್ಲಿಯೇ ನಾನು ಐಐಟಿ ಮತ್ತು ಕೋಟ ಬಗ್ಗೆ ಕೇಳಿ ಐಐಟಿ ಸೇರುವ ಕನಸು ಕಂಡೆ. ನನ್ನ ಶಾಖೆಯ ಸ್ನೇಹಿತರು ಕಳೆದ ಮೂರು ವರ್ಷ ಕೋಟದಲ್ಲಿ ತರಬೇತಿ ಪಡೆಯುತ್ತಿದ್ದಾಗ ಮಾನಸಿಕ ಬೆಂಬಲ ಮತ್ತು ಮಾರ್ಗದರ್ಶನ ನೀಡಿದರು" ಎಂದು ಬಲದೇವ್ ಹೇಳುತ್ತಾನೆ.

# ಇಸ್ರೋ ಕಿರೀಟಕ್ಕೆ ಇನ್ನೊಂದು ಗರಿ – ಜಿಎಸ್‌ಎಲ್‌ವಿ ಮಾರ್ಕ್ 3

ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ತನ್ನ ಕಿರೀಟಕ್ಕೆ ಇನ್ನೊಂದು ಹೆಮ್ಮೆಯ ಗರಿ ಮೂಡಿಸಿಕೊಂಡಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಸ್ವಾವಲಂಬಿ ಆಗುವತ್ತ ಒಂದು ಮಹತ್ವದ ಹೆಜ್ಜೆಯಲ್ಲಿ ಸಂಪೂರ್ಣ ಸ್ವದೇಶೀ ನಿರ್ಮಿತ ಜಿಎಸ್‌ಎಲ್‌ವಿ ಮಾರ್ಕ್ 3 ಎಂಬ ರಾಕೆಟ್ ಜಿಸ್ಯಾಟ್ ಉಪಗ್ರಹವನ್ನು ಹೊತ್ತು ಜೂನ್ 5 ರಂದು ಆಗಸಕ್ಕೆ ಯಶಸ್ವಿಯಾಗಿ ಉಡಾಯಿಸಿದೆ. ಈ ಉಡಾವಣೆಯ ಸಾಧನೆಯ ಹಿಂದೆ ಒಂದು ಅವಮಾನವನ್ನು ಮೆಟ್ಟಿ ನಿಂತ ಭಾರತೀಯ ವಿಜ್ಞಾನಿಗಳ ರೋಚಕ ಕಥೆಯಿದೆ. ಈ ಯೋಜನೆಯಲ್ಲಿ ಬಳಸಲಾದ ಕ್ರಯೋಜೆನಿಕ್ ತಂತ್ರಜ್ಞಾನ 1993 ರಷ್ಟು ಹಿಂದೆಯೇ ಭಾರತದ ಕೈ ಸೇರಬೇಕಿತ್ತು, ಆ ಕುರಿತು ರಷ್ಯಾ ಭಾರತದೊಂದಿಗೆ 1991ರಲ್ಲಿಯೇ ಒಪ್ಪಂದಕ್ಕೂ ಸಹಿ ಹಾಕಿತ್ತು. ಆಗ ಮಧ್ಯ ಮೂಗು ತೂರಿಸಿದ ಅಮೇರಿಕಾ ಒಪ್ಪಂದದ ಅನುಷ್ಠಾನವನ್ನು ತಡೆಹಿಡಿಯಿತು.

ರಷ್ಯಾ ಸಹ ಆ ಸಮಯದಲ್ಲಿ 1990ರ ವಿಘಟನೆಯ ಬಳಿಕ ಅತ್ಯಂತ ದುರ್ಬಲ ಸ್ಥಿತಿಯಲ್ಲಿತ್ತು. ಹೀಗಾಗಿ ಅಮೆರಿಕಾದ ಒತ್ತಡಕ್ಕೆ ಮಣಿದು ಕ್ರಯೋಜೆನಿಕ್ ರಾಕೆಟ್ ತಂತ್ರಜ್ಞಾನ ನೀಡಲು ನಿರಾಕರಿಸಿತು. ಹಾಗೇನಾದರೂ ಆಗದೆ, ಕ್ರಯೋಜೆನಿಕ್ ತಂತ್ರಜ್ಞಾನ ಭಾರತಕ್ಕೆ ಆಗಲೇ ವರ್ಗಾವಣೆಯಾಗಿದ್ದರೆ ನಾವು ಇಂದು ಬಾಹ್ಯಾಕಾಶ ಕ್ಷೇತ್ರದಲ್ಲಿ ಇನ್ನೆಷ್ಟು ಉನ್ನತ ಸ್ಥಾನದಲ್ಲಿರುತ್ತಿದೆವೋ ಊಹಿಸಲಸಾಧ್ಯ. ಆದರೆ ಇದನ್ನೇ ಒಂದು ಸವಾಲಾಗಿ ಸ್ವೀಕರಿಸಿದ ಭಾರತೀಯ ವಿಜ್ಞಾನಿಗಳು ಅದನ್ನು ದೇಶೀಯವಾಗಿಯೇ ನಿರ್ಮಿಸಲು ಸಂಕಲ್ಪ ತೊಟ್ಟು ಸತತ 20 ವರ್ಷಗಳ ಅವಿರತ ತಪಸ್ಸಿನಿಂದ ಇದನ್ನು ನಿರ್ಮಿಸಿದ್ದಾರೆ. ಅದರ ಸಹಾಯದಿಂದ ಉಪಗ್ರಹವನ್ನು ನಭದ ನೆತ್ತಿಯ ಮೇಲಿರಿಸಿ ಅದನ್ನೀಗ ತಮ್ಮ ಸಾಧನೆಯ ಕಿರೀಟಕ್ಕೆ ಮುಕುಟ ಮಣಿಯನ್ನಾಗಿ ಮಾಡಿಕೊಂಡಿದ್ದಾರೆ.

ಈ ಸಾಮರ್ಥ್ಯ ಹೊಂದಿರುವ ವಿಶ್ವದ ಕೆಲವೇ ಬಾಹ್ಯಾಕಾಶ ಸಂಸ್ಥೆಗಳಾದ ಅಮೇರಿಕದ ನಾಸಾ, ಯೋರೋಪಿನ ಇಎಸ್‌ಎ, ಚೀನಾ, ರಷ್ಯಾಗಳ ಸಾಲಿನಲ್ಲಿ ಆರನೇ ದೇಶವಾಗಿ ಭಾರತ ಹೊರಹೊಮ್ಮಿದೆ. ಸ್ವದೇಶಿ ಕ್ರಯೋಜೆನಿಕ್ ತಂತ್ರಜ್ಞಾನದಿಂದ ಬಾಹ್ಯಾಕಾಶಕ್ಕೆ ಮಾನವರನ್ನು ಕಳುಹಿಸಬಲ್ಲ ಸಾಮರ್ಥ್ಯದ ರಾಕೆಟ್ ನಿರ್ಮಾಣ, ಚಂದ್ರಯಾನ್ – 2 ಮುಂತಾದ ಯೋಜನೆಗಳಿಗೆ ಬಲ ದೊರಕಿದೆ. ಹಾಗೆಯೇ 36ಸಾವಿರ ಕೀ.ಮೀ. ಎತ್ತರದ ಭೂಸ್ಥಿರ ಕಕ್ಷೆಗೆ ಉಪಗ್ರಹವನ್ನು ಸೇರಿಸಬಲ್ಲ ರಾಕೆಟ್ ನಿರ್ಮಾಣದಲ್ಲಿ ಸಂಪೂರ್ಣ ಸ್ವಾವಲಂಬನೆ ದೊರಕಿದ್ದು, ಶ್ರೀಹರಿಕೋಟದ ಉಡಾವಣಾ ಕೇಂದ್ರದಿಂದಲೇ 4 ಟನ್‌ಗೂ ಹೆಚ್ಚು ಭಾರದ ಉಪಗ್ರಹಗಳ ಉಡಾವಣೆ ಮಾಡಬಹುದಾಗಿದೆ. ಇಸ್ರೋ ಅತಿ ಕಡಿಮೆ ಖರ್ಚಿನಲ್ಲಿ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಬಲ್ಲುದಾಗಿದ್ದು ಇದರಿಂದ ಬಾಹ್ಯಾಕಾಶ ಕ್ಷೇತ್ರದಲ್ಲಿ ವಾಣಿಜ್ಯ ದೃಷ್ಟಿಯಿಂದಲೂ ಭಾರತ ಮುಂಚೂಣಿಗೆ ಬರಲಿದೆ.

TAPAS
reach the unreached

# 'ತಪಸ್' ಯೋಜನೆಯಡಿ ಓದಿ ಐಐಟಿಗೆ ಅರ್ಹತೆ ಪಡೆದ ಪ್ರತಿಭಾನ್ವಿತರು

ರಾಷ್ಟ್ರೋತ್ಥಾನ ಪರಿಷತ್ತಿನ 'ತಪಸ್' ಪ್ರಕಲ್ಪ, ಶಿಕ್ಷಣ ಕ್ಷೇತ್ರದ ಏಳಿಗೆಗಾಗಿ ಒಂದು ಉಪಕ್ರಮ. 'ತಪಸ್' ಪ್ರಕಲ್ಪವು ಸಮಾಜದಲ್ಲಿ ಸುವ್ಯವಸ್ಥೆಯ ಅವಶ್ಯಕತೆಯಿರುವ ಜನಸಮುದಾಯದಲ್ಲಿನ ಪ್ರತಿಭಾನ್ವಿತರಿಗೆ ಕಲಿಕೆಯಲ್ಲಿ ಆಸಕ್ತಿ ಮೂಡಿಸಿ ಅವಕಾಶ ಕೊಟ್ಟು ಅವರನ್ನು ದೇಶದ ಏಳಿಗೆ ಮತ್ತು ಬೆಳವಣಿಗೆಯ ಹರಿಕಾರರಾಗುವಂತೆ ಮಾಡುವತ್ತ ಗಮನಹರಿಸುತ್ತದೆ. ಈ ಯೋಜನೆಯ ಅಡಿಯಲ್ಲಿ ಪದವಿಪೂರ್ವ ಶಿಕ್ಷಣ ಮತ್ತು ಐಐಟಿ ಪ್ರವೇಶ ಪರೀಕ್ಷೆಯ ತರಬೇತಿಗಾಗಿ ಪ್ರಸ್ತುತ 10ನೇ ತರಗತಿಯಲ್ಲಿ ಓದುತ್ತಿರುವ ಪ್ರತಿಭಾನ್ವಿತ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಬಾಲಕರನ್ನು ಆಯ್ಕೆ ಮಾಡಿ ಸೂಕ್ತ ತರಬೇತಿ ನೀಡಲಾಗುತ್ತದೆ. ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (Indian Institute of Technology -IIT) ಇಂಜನಿಯರಿಂಗ್/ತಾಂತ್ರಿಕ ಮತ್ತು ಶುದ್ಧವಿಜ್ಞಾನ ಕ್ಷೇತ್ರಗಳಲ್ಲಿ ಪ್ರಮುಖವೆನಿಸಿವೆ. ಈ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳು ವೃತ್ತಿರಂಗದಲ್ಲಿ ಅತ್ಯುತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುತ್ತಿದ್ದಾರೆ.

ರಾಷ್ಟ್ರೋತ್ಥಾನ ಪರಿಷತ್ ಹಾಗೂ ಬೇಸ್(BASE) ಸಂಸ್ಥೆಯ ಸಹಯೋಗದಲ್ಲಿ ನಡೆಯುತ್ತಿರುವ 'ತಪಸ್'ನಲ್ಲಿ ಈ ವರ್ಷ ಜೆಇಇ ಪರೀಕ್ಷೆಗೆ ತರಬೇತಿ ಪಡೆಯುತ್ತಿದ್ದ 36 ವಿದ್ಯಾರ್ಥಿಗಳ ಪೈಕಿ 19 ಮಂದಿ ಪ್ರತಿಷ್ಠಿತ ಐಐಟಿ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ.

ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಸಿಟಿಯ ಅಂಜಿನಪ್ಪನ ತಾಯಿ ಕೂಲಿ ಮಾಡಿ ಮಗನನ್ನು ಓದಿಸುತ್ತಿದ್ದಾರೆ. ಅಂಜಿನಪ್ಪ ಅಖಿಲ ಭಾರತ ಮಟ್ಟದಲ್ಲಿ 91ನೇ ರ್‍ಯಾಂಕ್ ಪಡೆದಿದ್ದಾನೆ. ತನಗೆ ಸಿಕ್ಕಿದ ಉಚಿತ ಶಿಕ್ಷಣದಿಂದ ಪ್ರೇರಿತರಾಗಿರುವ ಅಂಜಿನಪ್ಪ ಮುಂದೆ ಚೆನ್ನಾಗಿ ವ್ಯಾಸಂಗ ಮಾಡಿ ಬಡ ವಿದ್ಯಾರ್ಥಿಗಳ ಓದಿಗೆ ಸಹಾಯಹಸ್ತ ನೀಡುವುದಾಗಿ ಹೇಳಿಕೊಂಡಿದ್ದಾನೆ. ಇನ್ನು ಬಾಗಲಕೋಟೆಯ ಹಳ್ಳಿಯೊಂದರ ಹುಡುಗ ಪ್ರೇಮ್‌ಕುಮಾರನ ಪೋಷಕರು ದಿನಗೂಲಿ ಕಾರ್ಮಿಕರು, 'ತಪಸ್'ನಲ್ಲಿ ಓದಿದ ಪ್ರೇಮ್‌ಕುಮಾರ್ 213ನೇ ರ್‍ಯಾಂಕ್ ಪಡೆದು ಐಐಟಿಗೆ ಪ್ರವೇಶ ಪಡೆದಿದ್ದಾನೆ. ಬೆಂಗಳೂರಿನವನೇ ಆದ ಶ್ರೀಧರ್ 4428ನೇ ರ್‍ಯಾಂಕ್ ಪಡೆದಿದ್ದಾನೆ. ಸಣ್ಣ ವಯಸ್ಸಿಗೆ ತಂದೆಯನ್ನು ಕಳೆದುಕೊಂಡು ಮನೆಯಲ್ಲಿ ಆರ್ಥಿಕ ಸಂಕಷ್ಟವಿರುವ ಶ್ರೀಧರನ ತಾಯಿ ಮಕ್ಕಳಿಗೆ ಮನೆಪಾಠ ಮಾಡುವ ಮೂಲಕ ಸಂಸಾರ ನಡೆಸುತ್ತಿದ್ದಾರೆ.

ಇದುವರೆಗೆ ಹುಡುಗರಿಗೆ ಮಾತ್ರ ಉಚಿತ ಶಿಕ್ಷಣ ತರಬೇತಿ ಯೋಜನೆ ನಡೆಸುತ್ತಿದ್ದ ರಾಷ್ಟ್ರೋತ್ಥಾನ ಪರಿಷತ್ ಈ ವರ್ಷದಿಂದ ವಿದ್ಯಾರ್ಥಿನಿಯರಿಗಾಗಿ ಸಾಧನಾ ಎನ್ನುವ ಪ್ರಕಲ್ಪವನ್ನು ಆರಂಭಿಸಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.